ಇದು ಬಹಳ ವರ್ಷಗಳಿಂದ ನಿಂತಿರತಕ್ಕ ಕೆಲಸವಾಗಿರುವುದರಿಂದ ಕೆಲವು ಸಮಯ ಹಿಡಿಯುತ್ತದೆ. ಪುನರ್ ಜನರೇಷನ್ ಮಾಡಬೇಕಾದರೆ, ಸ್ಪೆಂ ಇಂಪ್ರೂವ್‌ಮೆಂಟ್ ಮಾಡಬೇಕಾಗುತ್ತದೆ. ಈಗ ಆ ಕಡೆ ಗಮನ ಕೊಟ್ಟಿದ್ದೇವೆ. ಕೆಲಸ ಮಾಡುತ್ತೇವೆ.

2) ಭೂಸುಧಾರಣೆ ಕಾನೂನಿನ್ವಯ ಗೇಣಿದಾರರು ಕಟ್ಟತಕ್ಕ ಪರಿಹಾರ ಕಂತಿನ ಹಣದ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ನಾನು ಕಂದಾಯ ಮತ್ತು ಸಹಕಾರ ಹಾಗೂ ಮುಖ್ಯಮಂತ್ರಿಯವರ ಗಮನವನ್ನು ನಿಯಮ ೭೫ರ ಮೇರೆಗೆ ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು). —

ಕಾಂಗ್ರೆಸ್ ಸರ್ಕಾರ ಭೂ ಸುಧಾರಣೆ ಕಾನೂನಿನ್ವಯ ಗೇಣಿದಾರರಿಗೆ ಕೊಟ್ಟ ಜಮೀನು ಬಗ್ಗೆ ಕಟ್ಟಬೇಕಾದ ಪರಿಹಾರ ಕಂತಿನ ಹಣವನ್ನು ಮನ್ನಾ ಮಾಡಿಸುವುದಾಗಿ ಸರ್ಕಾರ ಘೋಷಿಸಿದ್ದಾಗಿಯೂ ಭೂ ಅಭಿವೃದ್ಧಿ ಬ್ಯಾಂಕ್ ಮೂಲಕ ಹಣ ಪಡೆದು ಸರ್ಕಾರಕ್ಕೆ ಕಟ್ಟಿ ಬಾಕಿ ಉಳಿದ ಹಣಕ್ಕೆ ರಾಜ್ಯ ದಾದ್ಯಂತ ರೈತರು ಜಮೀನು ಹರಾಜು ಮಾಡುವುದಾಗಿ ಘೋಷಣೆ ಮಾಡಿರುತ್ತಾರೆ. ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಲು ಸದನದಲ್ಲಿ ಅವಕಾಶ ಕಲ್ಪಿಸಿಕೊಡಬೇಕಾಗಿ ಮಾನ್ಯ ಕಂದಾಯ ಮಂತ್ರಿಯವರ ಗಮನ ಸೆಳೆಯುತ್ತೇನೆ ಎಂದು ಮಾನ್ಯ ಸದಸ್ಯರಾದ ಶ್ರೀ ಬಿ. ಸ್ವಾಮಿರಾವ್ ಮತ್ತು ಗೋಪಾಲಕೃಷ್ಣ ಮುಖಾಂದ ಕಾನಡೆ ಅವರು ಸೂಚನೆ ಕಳುಹಿಸಿರುತ್ತಾರೆ.

ತಿದ್ದುಪಡಿಯಾದ ಭೂ ಸುಧಾರಣೆ ಕಾಯಿದೆಯ ಕಲಂ ೫೩ರ ಅನ್ವಯ ಒಬ್ಬ ಗೇಣಿದಾರನು ತನಗೆ ಭೂ ಸುಧಾರಣಾ ಕಾಯಿದೆಯ ಮೂಲಕ ಬಂದ ಭೂಮಿಯು ಸೇರಿದಂತೆ ೧೦ ಎಕರೆಗಿಂತ ಕಡಿಮೆ 'ಡಿ' ದರ್ಜೆಯ ಅಥವಾ ಅದಕ್ಕೆ ತತ್ಸಮಾನವಾದ ಇತರೆ ದರ್ಜೆಯ ಭೂಮಿಯನ್ನು ಹೊಂದಿದ್ದರೆ ಅಂತಹ ಮಾಜಿ ಗೇಣಿದಾರನು ಸರ್ಕಾರಕ್ಕೆ ತನಗೆ ನೀಡಲಾದ ಭೂಮಿಯ ಬಗ್ಗೆ ಪ್ರೀಮಿಯಂ ಹಣ ಕಟ್ಟಬೇಕಾಗಿಲ್ಲ. ಆದರೆ ಈ ರಿಯಾಯಿತಿಯು ದಿನಾಂಕ ೧೭-೧೦-೪೪ರಂದು ಅಥವಾ ನಂತರ ಪ್ರೀಮಿಯಂ ಹಣದ ಕಂತನ್ನು ಕಟ್ಟಬೇಕಾದವರಿಗೆ ಮಾತ್ರ ಅನ್ವಯವಾಗುತ್ತದೆ. ಆದರೆ ಈ ರಿಯಾಯಿತಿ ಅನ್ವಯಿಸದೆ ಪ್ರೀಮಿಯಂ ಹಣ ಕಟ್ಟಬೇಕಾಗಿರುವವರು ಅಂತಹ ಹಣವನ್ನು ಸರ್ಕಾರಕ್ಕೆ ಕಟ್ಟಿದ್ದರೆ ಅದನ್ನು ಭೂ ಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲು ಮಾಡ ಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಅವರ ಜಮೀನು ಹರಾಜಿಗೆ ಬಂದಿದೆ. ಈಗ ಅಲ್ಪಸ್ವಲ್ಪ ಹಣ ಕಟ್ಟಿರುವ ರೈತರಿಗೆ ಹಿಂಸೆ ಆಗುತ್ತಿದೆ. ಅಲ್ಪಸ್ವಲ್ಪ ಹಣ ಕಟ್ಟಿರತಕ್ಕ ಮನೆಗಳು ಹರಾಜು ಆಗುತ್ತಿವೆ. ಇದು ಇಡೀ ರಾಜ್ಯಾದ್ಯಂತ ಆಗುತ್ತಿದೆ, ಇದನ್ನು ತೀವ್ರವಾಗಿ ಪರಿಶೀಲಿಸಿ ಅವರು ಕಟ್ಟಬೇಕಾದ ಹಣವನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆ ಈ ಮನೆಯಲ್ಲಿ ಚರ್ಚೆಗೆ ಬಂದಾಗ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಮುಂದೆ ಕಟ್ಟತಕ್ಕ ಕಂತುಗಳನ್ನು ಪಸೂಲು ಮಾಡುವುದಿಲ್ಲ. ಆದರೆ ಹಿಂದಿನದು ಕೊಡಬೇಕಾಗುತ್ತದೆ ಎಂದು ಹೇಳಿವ್ವೇವೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿದಾಗ ಈ ತರಹ ಸಪಲತ್ತುಗಳನ್ನು ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈಗ ತಾವು ಬಹಳ ದೊಡ್ಡ ಮನಸ್ಸು ಮಾಡಬೇಕು. ಈಗ ತಾವು ನಿಯಮ ೫೩ರ ಪ್ರಕಾರ ಕನ್‌ಸೇಷನ್ ಕೊಟ್ಟಿದ್ದೀರಿ. ತಮಗೆ ಗೊತ್ತಿರುವಂತೆ ಗೇಣಿ ದಾರರಿಗೆ ಜಮೀನು ಸಿಕ್ಕಿದೆ. ನೇರವಾಗಿ ಬಿ.ಎಲ್.ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಕಂತು ಕಟ್ಟಿದವರು. ಬಡವರು ಮಾತ್ರ ಸಾಲ ತೆಗೆದುಕೊಂಡರು. ನಿಜವಾದ ಬಡವನಿಗೆ ಇವರಿಂದ ಅನುಕೂಲ ಆಗಲಿಲ್ಲ. ಅವನ ಜಮೀನು ಇವೊತ್ತು ಹರಾಜು ಆಗುತ್ತಿದೆ. ಎರಡು ಸಾವಿರ ರೂಪಾಯಿ ಸಾಲಕ್ಕೆ ಎರಡು ಸಾವಿರ ರೂಪಾಯಿ ಬಡ್ಡಿಯಾಗಿದೆ. ಅವರು ಸಣ್ಣ ರೈತರು ಇದ್ದಾರೆ. ಆದ್ದರಿಂದ ಈ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಬಡವರನ್ನು ಉಳಿಸುತ್ತೀರಾ? ತಾವು ಈ ರೀತಿ ಕನ್‌ಸೇಷನ್ ಕೊಟ್ಟಮೇಲೆ ಎಷ್ಟು ಕೋಟಿ ರೂಪಾಯಿ ೧೦ ಮತ್ತೆ ಒಳಗಡೆ ಇರತಕ್ಕವರಿಗೆ ಅನುಕೂಲ ಆಯಿತು ತಿಳಿಸುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಪದೇ ಪದೇ ಈ ಮನೆಯಲ್ಲಿ ಹೇಳುತ್ತಲೇ ಇದ್ದೇನೆ. ಮುಂದೆ ಕೊಡತಕ್ಕ ಕಂತುಗಳ ಬಗ್ಗೆ ತಿದ್ದುಪಡಿ ಕಾನೂನು ಪಾಸ್ ಮಾಡಿದ್ದೇವೆ. ಅದನ್ನು ಪಸೂಲು ಮಾಡುವುದಿಲ್ಲ. ಹಿಂದೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ತೆಗೆದು ಕೊಂಡಿದ್ದು ಕೊಡಬೇಕಾಗುತ್ತದೆ. ಅದರ ಬಗ್ಗೆ ಸ್ಪಷ್ಟವಾದ ನಿಲುವು ಹೇಳಿದ್ದೇನೆ. ಈಗ ನನ್ನಲ್ಲಿ ಅಂಕಿಅಂಶಗಳು ಇಲ್ಲ, ಅದನ್ನು ನಾನು ಕೊಡುತ್ತೇನೆ. ಹಿಂದೆ ಬಿಲ್ ಬಗ್ಗೆ ಚರ್ಚೆ ಮಾಡಿದಾಗ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ತಮಗೆ ಬೇಕಾದರೆ ಇನ್ನೊಂದು ಸಾರಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದಿರಿ ಹೊರತು ಸ್ಪಷ್ಟವಾಗಿ ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡವರಿಗೆ ಸಿಕ್ಕುವುದಿಲ್ಲ ಎಂದು ಹೇಳಲಿಲ್ಲ. ತಾವು ಪುನರ್‌ಪರಿಶೀಲನೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ.

ಶ್ರೀ ಬಿ. ಸತ್ಯನಾರಾಯಣ.—ಅಧ್ಯಕ್ಷರೇ, ಈ ಹಿಂದಿನ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಸಹಕಾರ ಮಂತ್ರಿಗಳನ್ನು ಕೇಳಿದಾಗ, ಕಂದಾಯ ಮಂತ್ರಿಗಳನ್ನು ಕೇಳಿ ಎಂದು ಹೇಳಿದರು. ಕಂದಾಯ ಮಂತ್ರಿಗಳನ್ನು ಕೇಳಿದಾಗ ಮುಖ್ಯಮಂತ್ರಿಗಳನ್ನು ಕೇಳಿ ಎಂದು ಹೇಳಿದರು. ಅದೇ ಕಾರಣದಿಂದ ಸಹಕಾರ ಮಂತ್ರಿಗಳು, ಕಂದಾಯ ಮಂತ್ರಿಗಳು, ಮುಖ್ಯಮಂತ್ರಿಗಳು ಎಂದು ಪ್ರಸ್ತಾಪ ಮಾಡಿ ಬರೆದಿದ್ದೇನೆ. ಆದ್ದರಿಂದ ಇದು ಬಹಳ ದೊಡ್ಡ ವಿಷಯ. ಇದರ ಬಗ್ಗೆ ಹೇಳಬೇಕೆಂದರೆ ಬಡವರು ಸಾಯುತ್ತಿದ್ದಾರೆ. ಅವರ ಜಮೀನು ಹರಾಜಿಗೆ ಬಂದಿದೆ. ಈ ಒಂದು ವಿಷಯ ಬಹಳ ಮುಖ್ಯವಾದ ವಿಷಯ ಎಂದು ಹೇಳಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯದ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ.

ಅಧ್ಯಕ್ಷರು.—ಈಗ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಯವರು ವಿಧಾನ ಪರಿಷತ್ತಿನಲ್ಲಿದ್ದಾರೆ ಅವರು ಬಂದ ಮೇಲೆ ವೇದಾಂತ ಹೆಮ್ಮಿಗೆ ಅವರದು ಬಿ.ಎಸ್. ಯಡಿಯೂರಪ್ಪನವರದು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಇವೊತ್ತೇ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಅವರು ಯಾವಾಗ ಬರುತ್ತಾರೆ ಆಗ ತೆಗೆದುಕೊಳ್ಳೋಣ, ಇವೊತ್ತೇ ತೆಗೆದು ಕೊಳ್ಳೋಣ. ಈಗ ಪ್ರಕಟಣೆ.

ಪ್ರಕಟಣೆ

ಅಧ್ಯಕ್ಷರು.—ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧ಳಿನೇ ನಿಯಮದ ಮೇರೆಗೆ, ದಿನಾಂಕ ೨೨ನೇ ಫೆಬ್ರುವರಿ ೧೯೮೭ರಂದು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕಾರ ಪಡೆದ ಈ ಕೆಳಗೆ ನಮೂದಿಸಿರುವ ವಿಧೇಯಕಗಳನ್ನು ಈ ಮೂಲಕ ಕಳುಹಿಸುತ್ತಿದ್ದೇನೆ.

೧) ೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ.

೨) ೧೯೮೭ನೇ ಇಸವಿಯ ಕರ್ನಾಟಕ ಇನಾಂ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕ."